ಇ) ಇವರುಗಳು ಉತ್ಪಾದನೆ ಮಾಡಿದ ವಸ್ತುಗಳಿಗೆ ಮಾರ್ಕೆಟಿಂಗ್ ವ್ಯವಸ್ಥೆಯನ್ನು ಮಾಡಲಾಗುವುದೇ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) ರಾಜ್ಯದ ಹೊಸ ಕೈಗಾರಿಕಾ ನೀತಿಯಂತೆ ಕೈಗಾರಿಕೆಗಳಿಗೆ ಮುದ್ರಾಂಕ ಶುಲ್ಕ ವಿನಾಯಿತಿ, ಭೂಪರಿವರ್ತನ ಶುಲ್ಕ ವಿನಾಯಿತಿ, ಬಂಡವಾಳ ಸಹಾಯಧನ, ಪ್ರವೇಶ ಶುಲ್ಕ ಪಾವತಿಯಿಂದ ವಿನಾಯಿತಿ, ಮಾರುಕಟ್ಟೆ ಬೆಂಬಲ ಇತ್ಯಾದಿಗಳನ್ನು ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ : ವರ್ಗದವರು ಸ್ಥಾಪಿಸುವ ಕೈಗಾರಿಕೆಗಳಿಗೆ ಈ ಎಲ್ಲ ರಿಯಾಯಿತಿಗಳ ಜೊತೆಗೆ ಸಾಮಾನ್ಯ ವರ್ಗಕ್ಕೆ ನೀಡಲಾಗುವ ಸಹಾಯಧನಕ್ಕಿಂತ ಹೆಚ್ಚುವರಿ ಶೇ.5 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ.1.00 ಲಕ್ಷಕ್ಕೆ ಮೀರದಂತೆ ನೀಡಲಾಗುವುದು.

ಆ) ಯಾವುದೂ ಇರುವುದಿಲ್ಲ

ಇ) ಹೊಸ ಕೈಗಾರಿಕಾ ನೀತಿಯಂತೆ ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ಬೆಂಬಲ, ಬೆಲೆ ಆದ್ಯತೆ ಮತ್ತು ಖರೀದಿಯಲ್ಲಿ ಆದ್ಯತೆ ನೀಡಲಾಗುತ್ತಿದೆ. ಸಣ್ಣ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳಿಗೆ ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ಮತ್ತು ಜಿಲ್ಲಾ ಸರಬರಾಜು ಮಾರುಕಟ್ಟೆ ಸಹಕಾರ ಸಂಘಗಳ ಮೂಲಕ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

1978 ರಿಂದ 1991ರ ಅವಧಿಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಜಾತಿಗಳು

2664(3178) ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1978 ರಿಂದ 1991ರ ಅವಧಿಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಜಾತಿಗಳು ಯಾವುವು?

ಆ)1991ರ ನಂತರ ಕರ್ನಾಟಕದಲ್ಲಿ ಪುನ: ಯಾವ ಜಾತಿಗಳು ಪರಿಶಿಷ್ಟ ಪಂಗಡವೆಂದು ಘೋಷಿಸಲಾಗಿದೆ?

ಇ) ಈ ರೀತಿ ಸೇರ್ಪಡೆಯಾದವರು ಸಂವಿಧಾನದ ಪರಿಶಿಷ್ಟ ಪಂಗಡ ಆದೇಶ 2ನೇ ತಿದ್ದುಪಡಿ ಕಾಯಿದೆ 1991ರ ಪ್ರಕಾರ ಪೂರ್ವಾನ್ವಯವಾಗಿ ಮೀಸಲಾತಿ ಪ್ರಯೋಜನವನ್ನು ಪಡೆಯಲು ಅರ್ಹರಿರುವರೇ?

ಈ) ಹೊಸದಾಗಿ ಮೀಸಲಾತಿಗೆ ಸೇರ್ಪಡೆಯಾದವರು ಪೂರ್ಣಾವಯವಾಗಿ ಮೀಸಲಾತಿ ಪ್ರಯೋಜನ ಪಡೆದು ಮುಂಬಡ್ತಿ ಹೊಂದಿರುವವರ ಸಂಖ್ಯೆ ಎಷ್ಟು?

ಉ) ಇದನ್ನು ಸರಿಪಡಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ.

ಊ) ಎಷ್ಟು ದಿವಸಗಳಲ್ಲಿ ಈ ನ್ಯೂನ್ಯತೆಗಳನ್ನು ಸರಿಪಡಿಸಲಾಗುವುದು?

ಶ್ರೀ ಹಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) 1978 ರಿಂದ 1991ರ ಅಂತ್ಯದವರೆಗೆ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡವೆಂದು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿರುವ ಜಾತಿಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 1991ರ ನಂತರ ಯಾವುದೇ ಜಾತಿಗಳನ್ನು ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿಸಿರುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಅನುಬಂಧ - 1

ಪರಿಶಿಷ್ಟ ವರ್ಗದ ಉಪಜಾತಿಯ ವಿವರಗಳು

ಅಡಿಯನ್	1
ಬಾರ್ಡಾ	2
ಬಾವಡ, ಬಾವ್ಚ	3
ಭಿಲ್, ಬಿಲಗ್ರಾರ್ಸಿಯ, ದೋಳಿ ಭೀಲ್, ಡುಂಗ್ರಿಭಿಲ್ ಡುಂಗ್ರಿಗರಾಸಿಯ, ಮವಾಸಿ ಭಿಲ್, ರಾವಲ್ ಭಿಲ್, ತಾಡ್ವಿಭಿಲ್, ಬಾಗಾಲಯ, ಭಿಲಾಲ, ಪಾವಾರಾ, ವಾಸವ ವಾಸನೇ	4
ಚೆಂಚು ಚೆಂಚವಾರ್	5
ಜೋದರಾ	6
ಡುಬ್ಲ, ತಲನಿಯ, ಹಲ್ಪತಿ	7

ಗಮಿಟ್, ಗಾಮ್ಬ, ಗವಿಟ್, ಮಾವ್ಚಿ, ಪಡ್ಡಿ, ವಾಳ್ಳಿ	8
ಗೊಂಡ್, ನಾಯಕ್‌ಪೋಡ್, ರಾಜ್‌ಗೊಂಡ್	9
ಗೌಡಲು	10
ಹಕ್ಕಿಪಿಕ್ಕಿ	11
ಹಸಲರು	12
ಇರುಳರ್	13
ಇರುಳಿಗ	14
ಜೇನುಕುರುಬ	15
ಕಾಡುಕುರುಬ	16
ಕಮ್ಮಾರ (ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಮಾತ್ರ)	17
ಕಣಿಯನ್, ಕಣ್ಯಾನ್ (ರಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮಾತ್ರ)	18
ಸೋನ ಕಥೋಡಿ, ಸೋನ್ ಕಟಕಾರಿ	19
ಕಾಟ್ಟು ನಾಯಕನ್	20
ಕೊಕ್ಕ, ಕೋಕ್ಕಿ, ಕುಕ್ಕ	21
ಕೋಳಿಧೋರ್, ಕೋಕ್ರೆ ಕೋಳಿ, ಕೊಲಾಜ ಕೊಲ್ಗ	22
ಕೊಂಡಕಾಪುಗಳು	23
ಕೊರಗ	24
ಕೋಟ	25
ಕೋಯ (ಬೀನ್‌ಕೋಯ, ರಜ್‌ಕೋಯ ಸೇರಿ)	26
ಕುಡಿಯ ಮಲಕುಡಿ	27
ಕುರುಬ (ಕೊಡಗು ಜಿಲ್ಲೆಯಲ್ಲಿ ಮಾತ್ರ)	28
ಕುರುಕುನರ್	29
ಮಹಾ ಮಲಸರ್	30
ಮಲ್ಯಕುಡಿಯ	31
ಮಲಸರ್	32
ಮಲಯಕಂಡಿ	33
ಮಲೇರು	34

ಮರಾಠ (ಕೊಡಗು ಜಿಲ್ಲೆಯಲ್ಲಿ ಮಾತ್ರ)	35
ಮರಾಟ (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ))	36
ಮೇದ	37
ನಾಯಕ್ಡ, ನಾಯಕ, ಜೋಳಿವಾಲಾ ನಾಯಕ ಕಪಾಡಿಯ ನಾಯಕ, ಮೋಟಾ ನಾಯಕ. ನಾನಾನಾಯಕ, ನಾಯಕ್, ನಾಯಿಕ್, ಬೇಡ, ಬೇಡರ್ ವಾಲ್ಮೀಕಿ	38
ವಳ್ಳಿಯನ್	39
ಪಣಿಯನ್	40
ಪಾರ್ಧಿ ಅಡ್ವಿಜೆಂಜೀರ್ ಪಾನ್ಸ್ ಪಾರ್ಧಿ	41
ಪಟೇಲಿಯಾ	42
ರಠಾವ	43
ಸೋಲಗ	44
ಸೋಲಿಗರು	45
ತೋಡ	46
ವಾರ್ಲಿ	47
ವಿಟೋಲಿಯ, ಕೊಟ್ವಾಲಿಯ ಬರೋಡಿಯ	48
ಯೆರವ	49

ಬಿ.ಸಿ.ಎಂ. ಮೆಟ್ರಿಕ್ ಪೂರ್ವ ಬಾಲಕರ ವಸತಿನಿಲಯವನ್ನು ಪ್ರಾರಂಭಿಸುವುದು

2665 (3030) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಬಿ.ಸಿ.ಎಂ ಮೆಟ್ರಿಕ್ ಪೂರ್ವ ಬಾಲಕ ಬಾಲಕಿಯರ ವಸತಿನಿಲಯಗಳು ಎಷ್ಟು; ಹಾಗೂ ಮೆಟ್ರಿಕ್ ನಂತರದ ಬಾಲಕ ಹಾಗೂ ಬಾಲಕಿಯರ ಬಿ.ಸಿ.ಎಂ. ವಸತಿ ನಿಲಯಗಳ ಸಂಖ್ಯೆ ಎಷ್ಟು;

ಆ) ಬೆಳಗಾಂ ಜಿಲ್ಲೆಯಲ್ಲಿ ಇರುವ ಬಿ.ಸಿ.ಎಂ ಮೆಟ್ರಿಕ್ ಪೂರ್ವ ಹಾಗೂ ನಂತರದ ಎಷ್ಟು ಬಾಲಕರ : ಬಾಲಕಿಯರ ಬಿ.ಸಿ.ಎಂ. ವಸತಿನಿಲಯಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)